ಭಾಷಾಲಯದ ಬಗೆಗಳು ಕೂಡ ಕುತೂಹಲಕರವಾಗಿವೆ. ಸಾವಿನ ದುಃಖದಲ್ಲಿ ಅದ್ದಿರುವ ಮನಸ್ಸು ಸುಲಭವಾಗಿ ನಮ್ಮನ್ನು ವಿಷಾದದಲ್ಲಿ ಮುಳುಗಿಸಿಬಿಡಬಹುದಿತ್ತು. ಆದರೆ ನಿಜವಾದ ಕವಿಯ ಎದೆಯಲ್ಲಿ ಅದು ಮರುಹುಟ್ಟಿಗೆ ಹವಣಿಸುತ್ತದೆ:

**ಒಂಬತ್ತು ತಿಂಗಳು ಸಾಕು ಮತ್ತೆ ಹುಟ್ಟಲಿಕ್ಕೆ**
**ಹನ್ನೆರಡು ತಿಂಗಳಾದವು ನೀನು ಹೋಗಿ ಗೊತ್ತೇ**
**ಇಲ್ಲದ**
**ಪರಸ್ಥಳಕ್ಕೆ. ಬಂದಿರಬೇಕಲ್ಲ ಮತ್ತೆ ಮೂರು ತಿಂಗಳ**
**ಚಿಗುರಾಗಿ**
**ಯಾರೋ ಉತ್ತ ನೆಲಕ್ಕೆ?**
**ಕಿಟಕಿಯಲ್ಲಿಣುಕುವ ದಾಸವಾಳವೇ? ಕಣಗಿಲೆ ಮೇಲೆ**
**ಸರಸರ ಹರಿವಳಿಲೆ?**
**ವಿನಾಕಾರಣ ದೀಪ ಸುತ್ತುವ ಪತಂಗವೆ?**
**ಎಳೆಗಂದಮ್ಮನ ತುಟಿಯಂಚಲ್ಲಿ**
**ಜಿನುಗುವ ಜೊಲ್ಲು ನಗೆಯೇ? ಎಲ್ಲಿರಬಹುದೆಂದು**
**ಹುಡುಕುತ್ತಿದ್ದೇನೆ**
**ನಿನ್ನಕ್ಕರೆಯ ಆಲಿಬಿಂದು. ನಡೆಯುತ್ತಿದೆ ಕೊನೆಯಿರದ**
**ಪತ್ತೆದಾರಿ.**
**ಉರಿಯುವ ನಂದಾದೀಪದ ಕತ್ತಲ್ಲಿ**
**ಸುಡುಸುಡುತ್ತೇರುತ್ತಿರುವ**
**ಎಣ್ಣೆಯ ಮೇಲ್ಮುಖೀ ಬೆಂಕಿ ಗುಟುಕು ನೀಲಾಂಜನದ**
**ಕುತ್ತಿಗೆಗಲ್ಲದೆ**
**ತಿಳಿಯದು ಮತ್ತಾರಿಗೂ**

ಇಲ್ಲಿ, ಮರುಹುಟ್ಟು ಕೇವಲ ಆಶಯವಾಗಿ ಮಾತ್ರವಲ್ಲದೆ 'ಆಲಿಬಿಂದು' ಎನ್ನುವ ಹೊಸ ಮತ್ತು ಸರಳ ಪದದ ಬಳಕೆಯಲ್ಲಿ ಆಕೃತಿಯಾಗಿಯೂ ಮಾರ್ಪಟ್ಟಿದೆ. 'ಆಲಿ' ಪದಕ್ಕೆ 'ಕಣ್ಣುಗುಡ್ಡೆ, 'ತಣ್ಣನೆ ನೀರು' ಜೊತೆಗೆ 'ಸಖಿ' ಎಂಬ ಅರ್ಥವೂ ಇದೆ. 'ಆಲಿಬಿಂದು' ಎಂದರೆ 'ಕಂಬನಿ', 'ಕಣ್ಣೀರು' ಎಂದೂ ಅರ್ಥವಾಗಬಹುದು. ಅಥವಾ ಹೆಂಡತಿಯ ಕಣ್ಣಿನ ಅಕ್ಕರೆಯ ಬಿಂದು ಎಲ್ಲಾದರೂ ಕಾಣಬಹುದೇ ಅಂತಲೂ ಆಗಬಹುದು. ಕಿಟಕಿಯಲ್ಲಿ 'ಇಣುಕುವ' ದಾಸವಾಳ, 'ಸರಸರ ಹರಿವಳಿಲೆ' ಪದಗಳು ನಮ್ಮ ಮನಸ್ಸಿನಲ್ಲಿ ಉಂಟುಮಾಡುವ ಚಿತ್ರಕ ಗುಣವು 'ಆಲಿಬಿಂದು'ವಿನ ನಿಶ್ಚಲಭಾವದ ಗುಣಕ್ಕೆ ಚಲನೆಯನ್ನು ಹೆಣೆಯುತ್ತದೆ. ಕರುಳಿನಿಂದ ಹುಟ್ಟುವ ದುಃಖ, ನೋವು ಏರುತ್ತೇರುತ್ತ ಎದೆ ತಲುಪಿ, ಗಂಟಲು ಹಾದು ಕೊನೆಗೆ ಅದು ಮುಟ್ಟುವುದು ಇವೇ ಕಣ್ಣುಗುಡ್ಡೆಗಳನ್ನು. ಈ ದುಃಖದ ತೀವ್ರತೆಯನ್ನು ಸೂಚಿಸುವ 'ಸುಡುಸುಡುತ್ತೇರುತ್ತಿರುವ' ಪದ ಅದೆಷ್ಟು ಸೂಕ್ತವಾಗಿ ಹಿಡಿದಿಟ್ಟುಕೊಂಡಿದೆ!

ಈ ದೀರ್ಘಕವನದಲ್ಲಿ ಗಂಡು-ಹೆಣ್ಣಿನ ನಡುವಿನ ಸಹಜ ಕಾಮವಿದೆ, ಆಕೆ ಅವನ ಸಂಸಾರವನ್ನು ಸಲಹಿದ ಬಗೆಯಿದೆ, ದೇಹದ ನೋವು ಹೈರಾಣು ಮಾಡುವಾಗಲೂ ಪುಟಿದೇಳುವ ಅವಳ ಜೀವನಪ್ರೀತಿಯ ಮನಸ್ಸಿದೆ. ಅವಳ ದೇಹವು ಕಾಯಿಲೆಯಿಂದ 'ನಿರುಪಯುಕ್ತ' ಸ್ಥಿತಿಗೆ ತಲುಪಿದೆ ಎಂದು ಬರೆದ ಮೇಲೆ ಬರುವ ಈ ಸಾಲುಗಳು ಒಟ್ಟಾರೆ ಕವಿತೆಗೆ ನಾಟಕೀಯ ತಿರುವನ್ನು ತರುತ್ತವೆ:

**ಅಲ್ಲಲ್ಲ.**
**ನಿನ್ನ ಒಡಲೀಗ ಸೇವಾಕಾರ್ಯಕ್ಕೆ ತೆರೆದ**
**ಪವಿತ್ರಕ್ಷೇತ್ರ; ಮೆಲ್ಲಮೆಲ್ಲಗೆ ಕಾಲೊತ್ತುವೆ... ಕಣ್ಣಲ್ಲಿ**
**ತೇಲಿ ಹೋಗುವ ಕ್ಷಣ ನೆಮ್ಮದಿ ಅಲೆ ಹುಟ್ಟಿಸಿದ್ದೇ ಈ**
**ಕೈಯ ಕೈಂಕರ್ಯ**
**ಇಗೋ ಹಿಡಿದ ತೊಡೆಯ ಸ್ನಾಯುಗೆ ನಿಷ್ಕಾಮದಿಂದ**
**ಮೂವೊತ್ತಿಮೆತ್ತಿ**
**ಮೃದುವಾಗಿ ಆಡಿಸುವೆ ಕೈ, ಹಾಯೆನಿಸಿ ನಿರಾಳವಾಗುವ**
**ಉಸಿರಾಟವಾಲಿಸುತ್ತಾ.**
**...ನಿರುಪಯುಕ್ತವಲ್ಲ ಈ ದೇಹ,**
**ಸೇವಾಯೋಗಕ್ಕೆ ಈಗಷ್ಟೇ ನನ್ನಿಷ್ಟದೈವ ತೆರೆದ**
**ಸೇವಾಕ್ಷೇತ್ರ...**

ಮೇಲೆ ಉದ್ಧರಿಸಿದ ಕವಿತೆಯ ಭಾಗಕ್ಕೂ, ಈ ಭಾಗಕ್ಕೂ ಲಯದಲ್ಲಿ ಇರುವ ಭಿನ್ನತೆಯನ್ನು ಗಮನಿಸಿದರೆ ಕವಿತೆಯ ಗಾಢತೆಯು ಅರಿವಾಗುತ್ತದೆ. ಪ್ರೀತಿಯ ಅನುಭವ ನಮಗೆ ಇಲ್ಲಿ ಪ್ರಿಯವಾಗುವ ಹಾಗೇ ಸಾವಿನ ಅನುಭವವೂ ಪ್ರಿಯವಾಗುವುದು ಕವಿತೆಯು ಮುಟ್ಟುವ ತೀವ್ರತೆಯಿಂದಾಗಿ. ಈ ತೀವ್ರತೆಯೇ ಬದುಕಿನ ಮತ್ತು ಸೃಷ್ಟಿಯ ವೈರುಧ್ಯಗಳನ್ನು ಕವನದಲ್ಲಿ ಅದ್ಭುತವಾಗಿ ಬೆಸೆದಿದೆ.

ಹಲವು ದಶಕಗಳಿಂದ ಕಾವ್ಯಕ್ಕೆ ತಮ್ಮನ್ನು